ಇದರಲ್ಲಿ ವಿಚಾರಣೆ ನಡೆಸತಕ್ಕದ್ದು ಮತ್ತು ಕೆಲಸದಿಂದ ತೆಗೆಯತಕ್ಕದ್ದು ಅಥವಾ ಬಿಡತಕ್ಕದ್ದು ಇದನ್ನು ಜಾತೀಯ ಆಧಾರದ ಮೇಲೆ ಮಾಡುತ್ತಿಲ್ಲ. ಯಾರೇ ಆಗಲಿ ತಪ್ಪಿತಸ್ಥರು. ಯಾವಾಗಲೂ ತಪ್ಪಿತಸ್ಥರೇ ಈ ವಿಷಯವನ್ನು ಗವಂನಕ್ಕೆ ತೆಗೆದುಕೊಂಡು ಮಾಡಬೇಕಾಗುತ್ತದೆ. ಇದರಲ್ಲಿ ಜಾತೀಯತೆ ಪ ಶ್ನೆ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ : ನನ್ನ ಪ್ರಶ್ನೆ ಜಾತಿಯ ಮೇಲೆ ಇಲ್ಲ. ಯಾವುದಾದರೂ ನಿರಪರಾಧಿಗಳಾದ ನೌಕರರಿಗೆ ಪ್ರಿಜ್ಯುಡಿಸ್‌ನಿಂದ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದು ಸರಿಯಲ್ಲ, ಇಂತಹವನ್ನು ಸರಕಾರದ ಗವಂನಕ್ಕೆ ತಂದರೆ ಆದನ್ನು ವಿಚಾರಮಾಡಿ ನ್ಯಾಯ ದೊರಕಿಸಿಕೊಡುತ್ತೀರಾ ?

ಶ್ರೀ ಹೆಚ್. ಎಂ. ಚನ್ನಬಸಪ್ಪ : ನಿರಪರಾಧಿಗಳಿಗೆ ಸರಕಾರ ಶಿಕ್ಷೆಮಾಡುತ್ತದೆ ಎನ್ನುವ ಭಾವನೆ ವಂನಸ್ಸಿನಲ್ಲಿಟ್ಟುಕೊಂಡಿದ್ದರೆ ಅದು ತಪ್ಪು.

SUSPENSION OF P. W. D. OFFICERS

446. SRI H. D. DEVE GOWDA (Holenarasipur):—

Will the Minister for Public Works and Electricity be pleased to state:—

(*a*) the number of officers of Public Works Department were suspended and the nature of charges levelled against them (particulars in respect of each offieer may kindly be furnished);

(*b*) the number of cases referred to the Vigilance Commission for enquiry and the number of cases in respect of which the departmental enquiry conducted;

(*c*) the number of cases in respect of which the enquiry is completed;

(*d*) whether the Government has accepted the enquiry report?

SRI H. M. CHANNABASAPPA (Minister for Public Works and Electricty):—

(*a*) Necessary particulars are given in the statement appended

(*b*) Seven cases covering II officers have been entrusted to Vigilance Commissioner for eaquiry and in all of them enquiry is being conducted.

(*c*) Three.

(*d*) One accepted; one Rejected; and the third is under consideration.

(SRI H. M. CHANNABASAPPA)

STATEMENT

Showing names of Officers in Public Works Department who were placed under suspension and allegations against them.

Sl. No.	Name of Officer	Date of order of suspension	Allegations
1	2	3	4
	Sriyuths:—		
1	P S. Gopal, Superintending Engineer.	2-5-1972	Irregularities in the execution of works under the Bangalore City Corporation, as revealed by the Audit Report.
2	S. Rudraiah, Executive Engineer.		
3	S. N. Veerappa, E. E.		
4	T. J. Das, E E.		
5	M R. Salian, E E.		
6	T. B. Chandrasekhar, E. E.		
7	T. N. Suryakanthraj, Assistant Engineer	4-5-1972	Misuse of powers for improper purposes in preparation of bills.
8	G. A Gubbana, Junior Engineer		
9	L. G. Kadamani, Junior Engineer.	11-5-1972	Writing Pseudonymous letter making allegations against his superior officers
10	S. A. HiremathI/C A. E.	12-5-1972	Obtaining from non-existent firms quotations for repairs to Goverament Vehicles
11	S. R. Raichur, A. E.	15-5-1972	Recording of false measurements and improper checkmeasurements.
12	M. K. Mithur, J. E.		
13	B. Subbaiah, E. E.	18-5-1972	Passing of bills and paymentoflargesums of money for works not executed and payment of huge secured advances in violation of codal rules.
14	M. K. Pandarinath, I/c E. E.		

1	2	3	4
15	S. K. Hanumantha Reddy, S. E.	23-5-1972	Improper calculation of data rate in the work of cement plastering of the R.C.C. Duct of the Sharavaty Valley Project.
16	G. A. Kareem, A. E.	30-5-1972	Transport of road metal once measured and paid for, use of rough stones on the road side as new stones and excess of payment in respect of some works amounting to misuse of power for improper purposes.
17	K. N. Narasimhaiah, J. E.		
18	K. Rangaiah, A. E.	30-8-7972	Execution of works without proper sanction commencing and execution of works without proper authority and sanction of estimates, scoring and erasure of entries in the measurements books without assigning any reasons. Recording of false and excess measurements and failures to get recoded measurement check measured etc. in respect of irrigation tank works and roadworks amounting to misconduct.
19	N. H. Rama Reddy, J. E.		
20	M. Chikkanappa, E.E.	16-11-1972	Disobedience of and disrespect to orders of Government and collections contrary to rules of conduct.

ಶ್ರೀ ಎಚ್. ಡಿ. ದೇವೇಗೌಡ.—ಉತ್ತರ ಒಂದು ಕೇಸನ್ನು ರಿಜೆಕ್ಟ್ ಮಾಡಲಾಗಿದೆ ಎಂದು ಹೇಳಲಾಗಿದೆ. ಇದಕ್ಕೆ ಕಾರಣಗಳೇನು.

† ಶ್ರೀ ಎಚ್. ಎಂ. ಚನ್ನಬಸಪ್ಪ.—ಇದನ್ನು ರಿಜೆಕ್ಟ್ ಮಾಡುವಾಗ ವಿಜಿಲೆನ್ಸ್ ಕಮಿಷನ್‌ನವರ ಶಿಫಾರಸನ್ನು ಗಮನದಲ್ಲಿಟ್ಟುಕೊಂಡು ಸರಕಾರ ತೀರ್ಮಾನ ತೆಗೆದುಕೊಂಡಿದೆ. ಇದರಲ್ಲಿ ಎರಡು ಮೂರು ಅಪಾದನೆಗಳು ಬಂದಿರತಕ್ಕ ಸನ್ನಿವೇಶಗಳೂ ಇದ್ದುದರಿಂದ ಇವನ್ನು ಪುನರ್ವಿಮರ್ಶೆ ಮಾಡಿ ರಿಜೆಕ್ಟ್ ಮಾಡಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ವಿಜಿಲೆನ್ಸ್ ಕಮಿಷನ್ ಮಾಡಿರುವ ರಿಪೋರ್ಟು ಮತ್ತು ಸರಕಾರ ನಿರ್ಣಯ ಇವೆರಡನ್ನೂ ಸಭೆಯ ಮುಂದೆ ಮಂಡಿಸಲಾಗುತ್ತದೆಯೇ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಕ್ರಮಬದ್ಧವಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಸರಕಾರ ತಪ್ಪು ಮಾಡಿರತಕ್ಕ ಅಧಿಕಾರಿಗಳ ಮೇಲೆ ಎನ್‌ಕ್ವೈರಿ ಮಾಡಲು ವಿಜಿಲೆನ್ಸ್ ಕಮಿಷನ್‌ನ್ನು ಇಟ್ಟಿದ್ದಾರೆ. ವಿಜಿಲೆನ್ಸ್ ಕಮಿಷನ್‌ನವರು ಕೊಟ್ಟಂತಹ ನಿರ್ಣಯ ನ್ಯಾಯವಾಗಿದ್ದರೂ ನಿಮ್ಮ ಅಭಿಪ್ರಾಯವನ್ನು ಯಾವ ಆಧಾರದಮೇಲೆ ತೀರ್ಮಾನ ತೆಗೆದುಕೊಂಡರು ಎನ್ನುವುದು ಬರುತ್ತದೆ. ಇದಕ್ಕಾಗಿ ಮಾನ್ಯ ಸಭೆಯನ್ನು ನಂಬಿಕೆಗೆ ತೆಗೆದುಕೊಂಡು ವಿಜಿಲೆನ್ಸ್ ಕಮಿಷನ್‌ನವರು ಮಾಡಿರುವ ಶಿಫಾರಸುಗಳೇನು ಇದರ ಮೇಲೆ ಸರಕಾರ ಏನು ನಿರ್ಣಯ ತೆಗೆದುಕೊಂಡಿದೆ ಎನ್ನುವುದನ್ನು ಸ್ಪಷ್ಟೀಕರಣ ಮಾಡುತ್ತೀರಾ.

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಜಿಲೆನ್ಸ್ ಕಮಿಷನ್‌ನವರು ಒಂದು ಶಿಫಾರಸನ್ನು ಮಾಡುತ್ತಾರೆ, ಅವರ ಶಿಫಾರಸಿನ ಮೇಲೆ ಆಖೈರು ತೀರ್ಮಾನ ತೆಗೆದುಕೊಳ್ಳುವದು ಸರಕಾರದ ಕೈಯಲ್ಲಿದೆ. ಇದನ್ನು ಪರಿಶೀಲನೆ ಮಾಡಿ ಆಖೈರು ತೀರ್ಮಾನ ತೆಗೆದುಕೊಳ್ಳುವುದು ಸರಕಾರಕ್ಕೆ ಒಳಪಟ್ಟಿದೆ ಮತ್ತು ಆ ವಿವರಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಅದನ್ನು ಸಭೆಯ ಮುಂದೆ ಇಡುವುದು ಸಾಧ್ಯವಿಲ್ಲ.

ಶ್ರೀ ಕೆ. ಎಂ. ನಾಗಣ್ಣ—ಸಸ್ಪೆನ್‌ಷನ್ ಪ್ರಶ್ನೆ ಬಂದಾಗ ನಾನು ಬಹಳ ತೀವ್ರವಾಗಿ ಹೇಳಿದೆ. ಏನೆಂದರೆ, ಅಧಿಕಾರಿಗಳು ಶಾಸಕರ ಮೇಲೆ ಮತ್ತು ಮಂತ್ರಿಗಳ ಮೇಲೆ ಒತ್ತಾಯ ತರಲಿಕ್ಕೆ ಸಾಕಷ್ಟು ಹಣವನ್ನು ಶೇಖರಿಸಿದ್ದಾರೆ. ನಾವೆಲ್ಲ ಜವಾಬ್ದಾರರಾಗಿರಬೇಕಾಗುತ್ತದೆ ಎಂದು ಹೇಳಿದಾಗ ಯಾವುದೇ ಪ್ರಭಾವಕ್ಕೆ ಒಳಗಾಗುವುದಿಲ್ಲ, ಏನೇ ಆಗಲೀ ತಪ್ಪಿತಸ್ಥರನ್ನು ಶಿಕ್ಷೆ ಮಾಡುತ್ತೇವೆಂದು ಅಪ್ಪಣೆ ಕೊಡಿಸಿದರು. ಆದರೆ ಈಚೆಗೆ ನಡೆಯುತ್ತಿರುವುದನ್ನು ನೋಡಿದರೆ ಇನ್ನೂ ವಿಚಾರಣೆ ಪೂರ್ತಿಯಾಗುವುದಕ್ಕೆ ಮೊದಲೇ ಕೆಲವರನ್ನು ಕೆಲಸದ ಮೇಲೆ ತೆಗೆದುಕೊಂಡಿದ್ದಾರೆ. ಹಾಗೆ ತೆಗೆದುಕೊಳ್ಳಲು ಕಾರಣಗಳೇನು ? ಅದೇ ರೀತಿ ಕಾರ್ಪೊರೇಷನ್ ಜೂನಿಯರ್ ಇಂಜಿನಿಯರುಗಳ ಮೇಲೆ ಸಹ ಚಾರ್ಜಸ್ ಇತ್ತು. ಅವರನ್ನು ಏಕೆ ಕೆಲಸಕ್ಕೆ ತೆಗೆದುಕೊಂಡಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಸ್‌ಪೆನ್‌ಷನ್ ಮಾಡತಕ್ಕದ್ದು ಮತ್ತು ವಿಚಾರಣೆ ನಡೆಸತಕ್ಕದ್ದು, ಸಸ್ಪೆನ್‌ಷನ್ ರಿವೋಕ್ ಮಾಡತಕ್ಕದ್ದು ಇವುಗಳೆಲ್ಲಕ್ಕೂ ಕೂಡ ಕೆಲವು ವಿಧಿ ನಿಯಮಗಳೂ, ಕ್ರಮಗಳೂ ಇವೆ. ಆ ಕ್ರಮಗಳನ್ನನುಸರಿಸಿ ಆಯಾ ಕೇಸಿನ ಸನ್ನಿವೇಶವೇನಿದೆ, ಪರಿಸ್ಥಿತಿ ಏನಿದೆ ಅದನ್ನು ಅನುಸರಿಸಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲರನ್ನೂ ಸಸ್ಪೆಂಡ್ ಮಾಡಬೇಕೆಂದಿಲ್ಲ. ಕೇಸಿನ ವಿದ್ಯಮಾನಗಳನ್ನು ಅವಲೋಕಿಸಿ ಒಬ್ಬ ಅಧಿಕಾರಿ ಅಧಿಕಾರದಲ್ಲಿದ್ದರೂ ಕೂಡ ಆ ಕೇಸಿಗೆ ತೊಂದರೆ ಬರುವುದಕ್ಕೆ ಅವಕಾಶವಿರುವುದಿಲ್ಲವೆನ್ನುವಂಥ ಸಂದರ್ಭಗಳಲ್ಲಿ ಸಸ್ಪೆಂಡ್ ಮಾಡುವುದಿಲ್ಲ, ಹಾಗೆಯೇ ವಿಚಾರಣೆ ನಡೆಸುತ್ತೇವೆ. ಕೆಲವು ಕೇಸುಗಳಲ್ಲಿ ಆತನು ಅಧಿಕಾರದಲ್ಲಿದ್ದರೆ ಅಧಿಕಾರದ ಪ್ರಭಾವವನ್ನುಬೀರಿ ಎವಿಡೆನ್ಸ್ ಟ್ಯಾಂಪರ್ ಮಾಡತಕ್ಕದ್ದು ಅಥವಾ ಅದಕ್ಕೆ ಧಕ್ಕೆತರತಕ್ಕ ಸನ್ನಿವೇಶಗಳಿದ್ದರೆ ಅಂಥ ಸಂದರ್ಭಗಳಲ್ಲಿ ಸಸ್ಪೆಂಡ್ ಮಾಡುತ್ತೇವೆ. ಸಸ್ಪೆಂಡ್ ಮಾಡಿದವೇಲೆ ಆರು ತಿಂಗಳನಂತರ ಯಾವ ಕಾರಣದಿಂದ ಬೇಕಾದರೂ ಸಸ್ಪೆನ್‌ಷನ್ ರಿವೋಕ್ ಮಾಡಬಹುದು. ಆದರೆ ಸರ್ವೇಸಾಮಾನ್ಯವಾಗಿ ಆರು ತಿಂಗಳ ಒಳಗೆ ವಿಚಾರಣೆ ಮುಗಿಸಬೇಕು ಎನ್ನತಕ್ಕದ್ದು ಒಂದು ಕ್ರಮವಿದೆ. ಕೆಲವು ವೇಳೆ ಆರು ತಿಂಗಳ ಒಳಗೆ ವಿಚಾರಣೆ ಮುಗಿಯುವುದಿಲ್ಲ, ಇನ್ನೂ ಹೆಚ್ಚು ಕಾಲ ಬೇಕಾಗುತ್ತದೆ. ಆದ್ದರಿಂದ ಆಯಾ ಕೇಸುಗಳ ವಿದ್ಯಮಾನಗಳನ್ನು ಅನುಸರಿಸಿ ಎಲ್ಲಿಯವರೆಗೆ ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಡಬಹುದು ಎನ್ನುವುದನ್ನು ಆಯಾ ಕೇಸಿನ ಸಂದರ್ಭ ನೋಡಿ ಇನ್ನು ಮುಂದೆ ಸಸ್ಪೆನ್‌ಷನ್‌ನಲ್ಲಿ ಇಡುವಂಥದ್ದು ಅಪ್ರಯೋಜಕ ಎಂದು ಗೊತ್ತಾದರೆ ಅಂಥವರನ್ನು ಕೆಲಸದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಆದುದರಿಂದ ಯಾವ ವ್ಯಕ್ತಿಯನ್ನು ಎಷ್ಟು ಕಾಲ ಸಸ್ಪೆನ್‌ಷನ್‌ನಲ್ಲಿ ಇಡಬಹುದು ಎನ್ನುವುದನ್ನು ಸರ್ಕಾರ ಆಗಿಂದಾಗ್ಗೆ ಪರಿಶೀಲನೆ ಮಾಡಿ ಇನ್ನು ಮುಂದೆ ಸಸ್ಪೆನ್‌ಷನ್‌ನಲ್ಲಿ

ಇರತಕ್ಕದ್ದು ಅನಾವಶ್ಯಕ ಎಂದು ಕಂಡು ಬಂದಾಗ ಅದನ್ನು ರಿಪೋಕ್ ಮಾಡಲಾಗುತ್ತದೆ. ಇನ್ನೂ ಅವಶ್ಯಕ ಎಂದು ಕಂಡು ಬಂದರೆ ಆರು ತಿಂಗಳು ಮೊದಲು ಸಸ್ಪೆನ್‌ಷನ್‌ನಲ್ಲಿಟ್ಟು ಆರು ತಿಂಗಳು ಕಳೆದ ಮೇಲೆ ಪುನಃ ಸಸ್ಪೆನ್‌ಷನ್‌ನಲ್ಲಿಡಬೇಕೇ ಬೇಡವೇ ಎನ್ನುವ ಬಗ್ಗೆ ತೀರ್ಮಾನವನ್ನು ಕೈಕೊಳ್ಳುತ್ತದೆ. ಇಷ್ಟು ವಿಷಯ ವಿಧಿ ನಿಯಮಗಳಿಗೆ ಸಂಬಂಧಪಟ್ಟಿರುವುದು.

ಶ್ರೀ ಎಚ್. ಡಿ. ದೇವೇಗೌಡ.—೧೫ ಜನ ಇಂಜನಿಯರುಗಳನ್ನು ಸಸ್ಪೆಂಡ್ ಮಾಡಿದ್ದು ಮೂರು ಸಂದರ್ಭಗಳಲ್ಲಿ ವಿಚಾರಣೆ ಮುಗಿದಿದೆ. ೧೨ ಕೇಸುಗಳು ಉಳಿದಿವೆ. ಸಸ್ಪೆನ್‌ಷನ್ ಮಾಡುವಾಗ ಇದ್ದಂಥ ಪರಿಸ್ಥಿತಿ, ವಿದ್ಯಮಾನವೇನು ? ರಿಪೋಕ್ ಮಾಡುವಾಗ ಇದ್ದಂಥ ಪರಿಸ್ಥಿತಿ ವಿದ್ಯಮಾನವೇನು ಎನ್ನುವುದನ್ನು ತಿಳಿಸುತ್ತಾರೆಯೇ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದೊಂದು ಕೇಸಿಗೆ ಒಂದೊಂದು ಪರಿಸ್ಥಿತಿ ಇರುತ್ತದೆ. ಎಲ್ಲ ಕೇಸುಗಳಿಗೂ ಒಂದೇ ಇರುವುದಿಲ್ಲ. ಆಯಾ ಕೇಸನ್ನು ವಿಚಾರಣೆ ಮಾಡಿ ವಿಷಯ ಪರಿಶೀಲನೆ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ವಿಜಿಲೆನ್ಸ್ ಕಮಿಷನ್ನಿಗೆ ರೆಫರ್ ಮಾಡಿರತಕ್ಕ ಕೇಸುಗಳಲ್ಲಿ ಮೂರು ಸಂದರ್ಭಗಳಲ್ಲಿ ಅವರಿಂದ ರಿಪೋರ್ಟ್ ಬಂದಿದ್ದು ಒಂದನ್ನು ಒಪ್ಪಿದೆ, ಒಂದು ರಿಜೆಕ್ಟ್ ಮಾಡಲಾಗಿದೆ ಮತ್ತು ಇನ್ನೊಂದು ಸರ್ಕಾರದ ಪರಿಶೀಲನೆಯಲ್ಲಿ ಇದೆ ಎಂದು ತಿಳಿಸಿದ್ದಾರೆ ಆಕ್ಸೆಪ್ಟ್ ಆಗಿರುವುದರಲ್ಲಿ ಯಾರಿಗೆ ಸಂಬಂಧಪಟ್ಟದ್ದು, ರಿಪೋರ್ಟ್ ಏನಿತ್ತು ಮತ್ತು ರಿಜೆಕ್ಟ್ ಮಾಡಿರುವುದು ಯಾವ ಅಧಿಕಾರಿಗೆ ಸಂಬಂಧಪಟ್ಟಂತೆ, ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ರಿಜೆಕ್ಟ್ ಮಾಡಿರುವುದಕ್ಕೆ ಕಾರಣಗಳೇನು ಎನ್ನುವುದನ್ನು ತಿಳಿಸುತ್ತಾರೆಯೇ.

ಶ್ರೀ ಎಚ್. ಎಂ. ಚನ್ನಬಸಪ್ಪ.—ವರದಿಗಳನ್ನು ಇಲ್ಲಿ ಇಡುವುದಕ್ಕೆ ಸಾಧ್ಯವಿಲ್ಲ. ತೀರ್ಮಾನಗಳನ್ನು ಏನು ತೆಗೆದುಕೊಳ್ಳಲಾಗಿದೆ ಎನ್ನುವುದನ್ನು ಸಭೆಗೆ ತಿಳಿಸಿದ್ದೇನೆ. ಕಾರ್ಪೊರೇಷನ್ನಿನ ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ್ ಮತ್ತು ಐದು ಜನ ಎಕ್ಸಿಕ್ಯೂಟಿವ್ ಇಂಜಿನಿಯರುಗಳಿಗೆ ಸಂಬಂಧಪಟ್ಟಂತೆ ಇನ್ನೂ ಎನ್‌ಕ್ವೈರಿ ನಡೆಯುತ್ತಿದೆ. ಸೂರ್ಯಕಾಂತರಾಜ್ ಮತ್ತು ಗುಬ್ಬಣ್ಣ ಅವರಿಗೆ ಸಂಬಂಧಪಟ್ಟ ಕೇಸಿನಲ್ಲಿ ವಿಜಿಲೆನ್ಸ್ ಕಮಿಷನ್ ರಿಪೋರ್ಟ್ ಆಕ್ಸೆಪ್ಟ್ ಆಗಿ ಸೆನ್‌ಷರ್ ಆಗಿದೆ. ಕಾಡಮನಿ ಅವರಿಗೆ ಸಂಬಂಧಪಟ್ಟ ರಿಪೋರ್ಟ್ ಪರಿಶೀಲನೆಯಲ್ಲಿದೆ. ಇನ್ನೂ ಎನ್‌ಕ್ವೈರಿಯಲ್ಲಿ ಇರತಕ್ಕದ್ದು ಇತರರಿಗೆ ಸಂಬಂಧಪಟ್ಟ ಕೇಸುಗಳು. ರಿಜೆಕ್ಟ್ ಮಾಡಿರತಕ್ಕದ್ದು ಸೂಪರಿಂಟೆಂಡಿಂಗ್ ಇಂಜಿನಿಯರ್ ಹನುಮಂತರೆಡ್ಡಿ ಅವರಿಗೆ ಸಂಬಂಧಪಟ್ಟದ್ದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಸಸ್ಪೆನ್‌ಷನ್ ರಿವೋಕ್ ಮಾಡುವ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳಿಗೂ ತಮಗೂ ಘರ್ಷಣೆ ಬಂತು ಎಂದು ನಮಗೆ ವರ್ತಮಾನ ತಲುಪಿದೆ. ಇದು ಸಾಮಾನ್ಯವಾದ ಘರ್ಷಣೆಯೇ, ಪ್ರಬಲವಾದ ಘರ್ಷಣೆಯೇ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದು ಮಾನ್ಯ ಸದಸ್ಯರ ಅಭಿಪ್ರಾಯ. ಅದಕ್ಕೆ ನಾನು ಮಾಡತಕ್ಕದು ಏನೂ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ —ಶ್ರೀ ಎಸ್.ಕೆ.ಹನುಮಂತರೆಡ್ಡಿಯವರನ್ನು, ಈಗಾಗಲೇ ಸಸ್ಪೆನ್‌ಷನ್ ಆದವರನ್ನು ಕೆಲಸದಮೇಲೆ ತೆಗೆದುಕೊಂಡಿದ್ದೀರಿ. ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಡುವಾಗ ಜಾಗೃತಾ ಆಯೋಗದವರಿಂದ ಸರ್ಕಾರಕ್ಕೆ ಏನಾದರೂ ಸೂಚನೆ ಬಂದಿತ್ತೇ ? ಹಾಗೆ ಬಂದಿದ್ದ ಪಕ್ಷದಲ್ಲಿ ಜಾಗೃತ ಆಯೋಗದ ಸೂಚನೆಯನ್ನು ಅಲ್ಲಗಳೆದು, ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಇದ್ದಂಥ ಪ್ರಬಲವಾದ ಕಾರಣಗಳೇನು ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಅವರ ಮೇಲೆ ಪ್ರೈಮಾಫೇಸ್ ಕೇಸ್ ಬಂದಿದ್ದರಿಂದ ಅವರನ್ನು ಸಸ್ಪೆನ್‌ಷನ್ ಮಾಡಲಾಗಿತ್ತು. ಅದನ್ನು ಪ್ರಜಾಸತ್ತೆಯ ವಿಧಿನಿಯಮಾನುಸಾರವಾಗಿ ಮಾಡಬೇಕು. ಸಸ್ಪೆನ್‌ಷನ್ ಆದಮೇಲೆ, ರೆಗ್ಯುಲರ್ ವಿಚಾರಣೆ ನಡೆದ ಮೇಲೆ ವಿಜಿಲೆನ್ಸ್ ಕಮೀಷನ್‌ನವರು ರಿಪೋರ್ಟ್ ಕೊಟ್ಟರು. ಅದನ್ನು ಸರ್ಕಾರ ಪರಿಶೀಲಿಸಿತು.

ಶ್ರೀ ಹೆಚ್. ಡಿ. ದೇವೇಗೌಡ.—ಶ್ರೀಮಾನ್ ನಾಗಣ್ಣನವರು ಏನು ಹೇಳಿದರು ಎಂದರೆ ಸಸ್ಪೆನ್‌ಷನ್‌ಗೆ ಗುರಿಯಾಗಿದ್ದಂಥ ಅಧಿಕಾರಿಗಳು ಲಕ್ಷಾಂತರ ರೂಪಾಯಿ ಹಣವನ್ನು ಜೋಡಿಸಿ ವಿಧಾನಸೌಧದ ಕಂಬಗಳನ್ನು ಸುತ್ತುತ್ತಾ ಇದ್ದರು ಎಂದು. ಅದರ ವಾಸನೆ ನಿಮ್ಮವರಿಗೂ ತಟ್ಟಲೇ ಇಲ್ಲವೇ ?

ಶ್ರೀ ಹೆಚ್.ಎಂ. ಚೆನ್ನಬಸಪ್ಪ.—ನನ್ನ ಮೂಗು ಅಷ್ಟು ಸೆನ್ಸಿಟೀವ್ ಆಗಿಲ್ಲ.